■ ಹನಿ



## ಸೈಲೆಂಟ್ ಕಿಲ್ಲರ್?

'ರೊಮ್ಯಾಂಟಿಕ್ ಹೀರೊ ಎಂದರೆ ಬಾಲಿವುಡ್‌ನಲ್ಲಿ ಶಾರೂಕ್ ಖಾನ್ ಒಬ್ಬನೇ' ಎನ್ನುವುದೀಗ ಸುಳ್ಳಾಗುತ್ತಿದೆ. ಆ ಸ್ಥಾನಕ್ಕೆ ರಣಬೀರ್ ಕಪೂರ್ ಲಗ್ಗೆ ಇಟ್ಟಿದ್ದಾನೆ. ರಣಬೀರ್ ಕಪೂರ್– ದೀಪಿಕಾ ಪಡುಕೋಣೆ ಅಭಿನಯದ ಹೊಸ ಚಿತ್ರ 'ಯೆ ಜವಾನಿ ಹೈ ದಿವಾನಿ' ಬಾಕ್ಸಾಫೀಸ್ ಗಳಿಕೆಯಲ್ಲಿ ಹೊಸ ದಾಖಲೆ ಬರೆಯುವತ್ತ ಮುನ್ನಡೆದಿದೆ. ಈಗಾಗಲೆ 'ಬಾಲಿವುಡ್‌ನ ಅತ್ಯಧಿಕ ಆರಂಭಿಕ ಗಳಿಕೆಯ ಮೂರನೇ ಚಿತ್ರ' ಎಂಬ ದಾಖಲೆ ಬರೆದಿದ್ದು, ಶೀಘ್ರದಲ್ಲೇ 'ಅತ್ಯಧಿಕ ಸಾರ್ವಕಾಲಿಕ ಗಳಿಕೆಯ ಚಿತ್ರ' ಎಂಬ ದಾಖಲೆಯನ್ನೂ ಬರೆಯುವಂತಿದೆ! ಇತ್ತೀಚಿನವರೆಗೆ 'ಚಾಕೊಲೇಟ್ ಹೀರೊ' ಎಂದೇ ಕರೆಯಲ್ಪಡುತ್ತಿದ್ದ ರಣಬೀರ್ ಈಗ ಅತ್ಯುತ್ತಮ ರೊಮ್ಯಾಂಟಿಕ್ ಹೀರೊ ಎಂದು ಗುರುತಿಸಲ್ಪಟ್ಟಿದ್ದಾನೆ. ಅದರಲ್ಲೂ ಉತ್ತರ ಅಮೆರಿಕಾ ಮತ್ತು ಯೂರೋಪಿನ ದೇಶಗಳಲ್ಲಿ 'ಯೆ ಜವಾನಿ...' ಚಿತ್ರ ಪ್ರೇಕ್ಷಕರನ್ನು ಹುಚ್ಚೆಬ್ಬಿಸಿದ್ದು, ಅಲ್ಲಿ ಈವರೆಗಿನ ಶಾರೂಕ್ ಮತ್ತು ಸಲ್ಮಾನ್ ಖಾನ್ ಚಿತ್ರಗಳ ಕಲೆಕ್ಷನ್ ದಾಖಲೆಯನ್ನೂ ಮುರಿದಿದೆಯಂತೆ! ಇನ್ನೂ 30ರ ಹರೆಯದಲ್ಲಿ ಸರಾಗವಾಗಿ ಹಿಟ್ ಸಿನಿಮಾಗಳನ್ನು ನೀಡುತ್ತಿರುವ ರಣಬೀರ್‌ನ ಬೆನ್ನ ಹಿಂದೆ ಬಾಲಿವುಡ್‌ನ ಪ್ರತಿಷ್ಠಿತ ನಿರ್ಮಾಪಕ–ನಿರ್ದೇಶಕರ ದಂಡು ನಿಂತಿರುವುದೂ ಕುತೂಹಲಕರ ಸಂಗತಿ. ಈವರೆಗೆ ಶಾರೂಕ್‌ನ ನಿಕಟ ಸ್ನೇಹಿತನಾಗಿದ್ದ ಬಾಲಿವುಡ್‌ನ ಯಶಸ್ವೀ ನಿರ್ದೇಶಕ ಕರಣ್ ಜೋಹರ್ ಬ್ಯಾನರ್‌ನಿಂದಲೇ ರಣಬೀರ್‌ನ 'ಯೆ ಜವಾನಿ..' ನಿರ್ಮಾಣ ಆಗಿರುವುದು ಗಮನಾರ್ಹ.

ರಣಬೀರ್ ಬಾಲಿವುಡ್‌ಗೆ ಕಾಲಿಟ್ಟದ್ದು ಸಂಜಯ್ ಲೀಲಾ ಬನ್ಸಾಲಿ ಜತೆಗೆ ಸಹನಿರ್ದೇಶಕನಾಗಿ. ವರ್ಷದ ಬಳಿಕ 2007ರಲ್ಲಿ ಹೀರೊ ಆಗಿ ಬಂದ ಮೊದಲ ಚಿತ್ರ 'ಸಾವರಿಯಾ' ಬಾಕ್ಸಾಫೀಸ್‌ನಲ್ಲಿ ಗೋತಾ ಹೊಡೆಯಿತು. ಆರಂಭದ ಎರಡು ವರ್ಷಗಳಲ್ಲಿ ಈತನ ನಟನೆಗಿಂತ ಹೆಚ್ಚಾಗಿ ರೊಮ್ಯಾನ್ಸ್‌ಗಳೇ ಸುದ್ದಿ ಮಾಡಿದವು. 'ಸಿನಿಮಾ ಮನೆತನದ ಬೇಜವಾಬ್ದಾರಿ ಹುಡುಗ'ನೆಂದೇ ಈತನನ್ನು ಎಲ್ಲರೂ ಅಂದುಕೊಂಡಿದ್ದರು. ವೇಕಪ್ ಸಿಧ್, ರಾಕೆಟ್‌ಸಿಂಗ್, ರಾಕ್‌ಸ್ಟಾರ್ ಮತ್ತು ಬರ್ಫಿ ಚಿತ್ರಗಳಲ್ಲಿ ಈತನ ಪ್ರತಿಭೆ ಗರಿಕೆದರಿ, ಅದೃಷ್ಟ ಖುಲಾಯಿಸಿತು. ಸ್ಟಾರ್‌ಗಿರಿ ಬಂದ ಬಳಿಕ ಈಗ 'ಬಾಲಿವುಡ್ ಬಾದ್‌ಶಾ' ಶಾರೂಕ್‌ಗೇ ಸದ್ದಿಲ್ಲದೆ ಸೈಡ್ ಹೊಡೆಯ ಹೊರಟಿದ್ದಾನೆ. ಮುಂದಿನ ವರ್ಷ ಈತನ ಹಲವು ಚಿತ್ರಗಳು ತೆರೆಗೆ ಬರಲಿವೆ. ಮುಖ್ಯವಾಗಿ ಬಾಲಿವುಡ್‌ನ ಅಭಿಜಾತ ಪ್ರತಿಭೆ ಕಿಶೋರ್ ಕುಮಾರ್ ಜೀವನಚರಿತ್ರೆ ಆಧರಿಸಿದ ಹೊಸ ಸಿನಿಮಾಕ್ಕೆ ಈತ ಹೀರೊ ಆಗಿ ಆಯ್ಕೆ ಆಗಿರುವುದು ಈತನಿಗೆ ಸಂದ ಗೌರವ ಎಂದೇ ಹೇಳಲಾಗುತ್ತಿದೆ. ದಶಕಗಳಿಂದ 'ಖಾನ್‌ತ್ರಯ'ರ ಕಪಿಮುಷ್ಟಿಯಲ್ಲಿರುವ ಬಾಲಿವುಡ್‌ನ, 'ಕೋಟಿ ಕ್ಲಬ್' ಬಿಸಿನೆಸ್, ಈ ಹೊಸ 'ಸೈಲೆಂಟ್ ಕಿಲ್ಲರ್'ನ ಹೊಡೆತಕ್ಕೆ ಕರಗಬಹುದೆ..?

## ಟೈಗರ್ ಮದುವೆ?

ಎಲ್‌ಡ್ರಿಕ್ ಟಾಂಟ್ ವುಡ್ಸ್ ಯಾನೆ ಟೈಗರ್ ವುಡ್ಸ್ ಮತ್ತೆ ಸುದ್ದಿಯಲ್ಲಿದ್ದಾನೆ. 'ಜಗತ್ತಿನಲ್ಲೇ ಅತ್ಯಧಿಕ ಹಣ ಗಳಿಸುತ್ತಿರುವ ಕ್ರೀಡಾಪಟು' ಎಂಬ ಹೆಗ್ಗಳಿಕೆಯ ಈ ವಿಶ್ವ ಗಾಲ್ಫ್ ಚಾಂಪಿಯನ್, ಇದೀಗ ಒಲಿಂಪಿಕ್ಸ್ ಸ್ಕೀ ಚಾಂಪಿಯನ್ ಲಿಂಡ್ಸೇ ವಾನ್ ಜತೆಗೆ ನಡೆಸುತ್ತಿರುವ ಡೇಟಿಂಗ್ ಪ್ರಣಯ, ಮದುವೆಯತ್ತ ವಾಲುತ್ತಿದೆಯಂತೆ. 'ಲಿಂಡ್ಸೇ ಜತೆಗೆ ಮದುವೆಯಾಗುವ, ಮಕ್ಕಳನ್ನು ಪಡೆಯುವ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಿದ್ದೇನೆ' ಎಂದು ವುಡ್ಸ್



ಮಾಧ್ಯಮದವರಿಗೆ ಸುಳಿವು ಬಿಟ್ಟುಕೊಟ್ಟಿದ್ದಾನೆ. 37ರ ಹರೆಯದ ಟೈಗರ್, ಹೆಸರಿಗೆ ತಕ್ಕಂತೆ, ವೃತ್ತಿಪರ ಗಾಲ್ಫ್‌ನಲ್ಲಿ ಮತ್ತೆ ವಿಶ್ವದ 'ನಂಬರ್ ಒನ್ ಪಟ್ಟ'ವನ್ನು ತನ್ನದಾಗಿಸಿಕೊಂಡಿದ್ದಾನೆ. ಅದರ ಬೆನ್ನಲ್ಲೇ ಪ್ರಣಯ, ಮದುವೆಯ ಕನಸು ಹುಟ್ಟಿದೆ.

ಟೈಗರ್ ವುಡ್ಸ್‌ನ ಜೀವನಕಥೆ ಯಾವ ಬಾಲಿವುಡ್ ಸಿನಿಮಾಗೂ ಕಡಿಮೆಯಿಲ್ಲ. 1997ರಲ್ಲೇ ವಿಶ್ವದ ನಂಬರ್ ಒನ್ ಗಾಲ್ಫರ್ ಆಗಿದ್ದನೀತ. 2004ರವರೆಗೆ 264 ವಾರಗಳ ಕಾಲ ಆ ಪಟ್ಟವನ್ನು ಯಾರಿಗೂ ಬಿಟ್ಟು ಕೊಡಲಿಲ್ಲ. ಬಳಿಕ ಎರಡನೆಯ ಸರದಿಯಲ್ಲಿ (2005ರಿಂದ 2010ರವರೆಗೆ) 281 ವಾರಗಳ ಕಾಲ ಮತ್ತೆ ನಂಬರ್ ಒನ್ ಪಟ್ಟ ಗಳಿಸಿ ವಿಶ್ವದಾಖಲೆ ಬರೆದ. ಎಲಿನ್ ನಾರ್ಡಿಗ್ರೆನ್ ಜತೆಗೆ ಆರು ವರ್ಷಗಳ ಕಾಲ ಸುಖ ಸಂಸಾರ ನಡೆಸಿದ. ಆದರೆ ಹೆಂಡತಿಯ ಕಣ್ತಪ್ಪಿಸಿ ಹಲವು ಹುಡುಗಿಯರ ಜತೆಗೆ ಈತ ನಡೆಸಿದ್ದ ಭಾನಗಡಿ ಹೊರಗೆ ಬಿದ್ದದ್ದೇ ಗದ್ದಲವಾಗಿ ಹೆಂಡತಿ ಸೋಡಾಚೀಟಿ ಕೊಟ್ಟಳು. ಕ್ರೀಡಾಂಗಣದಲ್ಲೂ ಏಟು ಬಿತ್ತು– 107 ವಾರಗಳ ಕಾಲ ಯಾವ ಟೂರ್ನಿಯಲ್ಲೂ ಜಯ ಸಿಗಲಿಲ್ಲ. ರ್‍ಯಾಂಕಿಂಗ್‌ನಲ್ಲಿ 'ವಿಶ್ವದ ನಂಬರ್ ಒನ್' ಆಗಿದ್ದಾತ 'ನಂಬರ್ 58'ಕ್ಕೆ ಕುಸಿದ! ಜಾಹೀರಾತು ಕಂಪೆನಿಗಳು ದೂರ ಸರಿದವು.

'ಹಣ, ಕೀರ್ತಿಯ ಉತ್ತುಂಗ ತಲುಪಿದ್ದೆ. ಆಗ ನಾನು ಏನು ಮಾಡಿದರೂ ಅದು ಸರಿ ಎಂದುಕೊಂಡಿದ್ದೆ. ಆದರೆ ಅದು ಮೂರ್ಖತನ ಎನ್ನುವುದು ಬಳಿಕ ಗೊತ್ತಾಯಿತು' ಎಂದು ಕಳೆದ ವರ್ಷ ಈತ ಸಂದರ್ಶನವೊಂದರಲ್ಲಿ ನುಡಿದಿದ್ದ. ಕುಸಿದುಬಿದ್ದ ವೃತ್ತಿ ಬದುಕನ್ನು ಎತ್ತಿ ಕಟ್ಟಿ ಮತ್ತೆ 'ನಂಬರ್ ಒನ್' ಆಗಿದ್ದಾನೆ. ಈಗ ಎರಡನೇ ಸಲ 'ಮದುಮಗ' ಆಗಹೊರಟಿದ್ದಾನೆ. ಲಿಂಡ್ಸೇ ಕೂಡಾ ಇತ್ತೀಚೆಗೆ ಗಂಡ ಥಾಮಸ್ ವಾನ್‌ಗೆ ಡೈವೋರ್ಸ್ ಕೊಟ್ಟಿದ್ದು, ಇದು ಸಮಜೋಡಿ ಅನ್ನಲಡ್ಡಿಯಿಲ್ಲ.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65